ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 1, Jul-Aug 2020, 122-126**
**©*IIMRD*, Mysuru**

IIMRD JOURNALS
**www.iimrd.com**

# ಸುಡುಗಾಡು ಸಿದ್ಧರ ಸಾಂಪ್ರದಾಯಿಕ ನ್ಯಾಯ ಪದ್ಧತಿ

**ಡಾ. ಎಂ.ಓ.ಉಮೇಶ**[1]

**ಪೀಠಿಕೆ**

ಬುಡಕಟ್ಟು ಹಾಗೂ ಅಲೆಮಾರಿ ಸಮುದಾಯಗಳಲ್ಲಿ ಸಾಮಾನ್ಯವಾಗಿ ತಮ್ಮದೇ ಆದ ನ್ಯಾಯ ಪಂಚಾಯಿತಿ ವ್ಯವಸ್ಥೆಯನ್ನು ಹೊಂದಿರುತ್ತವೆ. ತಮ್ಮ ಸಮುದಾಯದ ಯಾವುದೇ ಬಗೆಯ ಆಂತರಿಕ ಕಲಹ ಅಥವಾ ವ್ಯವಹಾರಗಳನ್ನು ಹೊರಗಡೆ ಬಿಡದೆ ತಮ್ಮಲ್ಲಿಯೇ ಅವುಗಳನ್ನು ಪರಿಹರಿಸಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಸಮಾಜದ ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಹೋಗುವ ಮನೋಭಾವವನ್ನು ಬೆಳೆಸಿಕೊಂಡಿರುತ್ತಾರೆ. ಅವರ ಬದುಕಿನ ಸ್ಥಿತಿ ಅತಂತ್ರವಾದರೂ ಸಾಮಾಜಿಕ ವ್ಯವಸ್ಥೆ, ನ್ಯಾಯ ಪಂಚಾಯಿತಿ, ಕಟ್ಟು ಪಾಡುಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುತ್ತಾರೆ. ಅವರಿಗೆ ಪ್ರಾಣಕ್ಕಿಂತ ಮಾನವೇ ಮುಖ್ಯ. ಇವರಲ್ಲಿ ಅತ್ಯಾಚಾರ, ಅವ್ಯವಹಾರ, ಕಳ್ಳತನ ಅನ್ಯಾಯಗಳು ನಡೆಯದಂತೆ ಎಚ್ಚರ ವಹಿಸುತ್ತಾರೆ. ಸಾಮಾಜಿಕ ಬಂಧನಗಳನ್ನು ಕಟ್ಟುಪಾಡುಗಳನ್ನು ಉಲ್ಲಂಘಿಸಿದವರ ಮೇಲೆ ಉಗ್ರ ಕ್ರಮ ಕೈಗೊಳ್ಳುವುದರ ಮೂಲಕ ಎಚ್ಚರಿಕೆಯಿಂದ ಜೀವನ ನಡೆಸುತ್ತಾರೆ. ಒಂದು ವೇಳೆ ಉಲ್ಲಂಘಿಸಿದರೆ ಅವರನ್ನು ಕುಲದಿಂದ ಬಹಿಷ್ಕರಿಸುವ ಕಠಿಣ ಶಿಕ್ಷೆಗಳೂ ಅವರಲ್ಲಿವೆ. ಹೀಗಾಗಿ ಈ ಸಮುದಾಯದ ಜನ ಸಾಮಾಜಿಕ ಕಟ್ಟುಪಾಡುಗಳ ಎದುರಿನಲ್ಲಿ ತಲೆಬಾಗಿ ನಡೆಯುವುದರಿಂದ ಅವರಲ್ಲಿ ನ್ಯಾಯ ಪಂಚಾಯಿತಿ ವ್ಯವಸ್ಥೆ ಉಳಿದುಬರಲು ಸಾಧ್ಯವಾಗಿದೆ.

ಪ್ರತಿಯೊಂದು ಸಮುದಾಯಗಳ ನ್ಯಾಯ ತೀರ್ಮಾನಗಳನ್ನು ಸಮುದಾಯದ ಹಿರಿಯರು ಬಗೆಹರಿಸುತ್ತಾರೆ. ನ್ಯಾಯ ಪಂಚಾಯ್ತಿಯನ್ನು ಹಿಂದಿನ ಕಾಲದಿಂದಲೂ ಮುಂದುವರಿಸಿಕೊಂಡು ಬಂದಿದ್ದಾರೆ. ಆಧುನೀಕರಣ, ಜಾಗತೀಕರಣ ಪ್ರಭಾವ ಬೀರಿದರೂ. ನ್ಯಾಯ ಪಂಚಾಯ್ತಿಯನ್ನು ಸಮುದಾಯದ ಹಿರಿಯರೆ ಬಗೆಹರಿಸುವುದನ್ನು ಕಾಣಬಹುದು. ಅವರ ನಿರ್ದೇಶನದಂತೆಯೇ ಅಲಿಖಿತ ವ್ಯವಸ್ಥೆಯನ್ನು ಸಮುದಾಯಗಳು ತಲ-ತಲಾಂತರಗಳಿಂದಲೂ ರೂಢಿಸಿಕೊಂಡು ಬರುತ್ತಿವೆ. ಅದಕ್ಕೆ ಸುಡುಗಾಡು ಸಿದ್ಧ ಸಮುದಾಯವು ಹೊರತಲ್ಲ.

ಸುಡುಗಾಡು ಸಿದ್ಧರಲ್ಲಿ ಹಬ್ಬ-ಹರಿದಿನ, ಜಾತ್ರೆ, ಉತ್ಸವ, ಮದುವೆ ಮರಣ, ನ್ಯಾಯ ಇತ್ಯಾದಿ ವ್ಯವಹಾರಗಳು ಸಮುದಾಯದ ಹಿರಿಯರ ಮುಖಾಂತರವೇ ನಡೆಯುವುದು. ಈ ಜವಾಬ್ದಾರಿಯನ್ನು ಹಿರಿಯ ನಾಯಕರ ಮುಖಾಂತರವೇ ಕಾರ್ಯಗಳನ್ನು ನಡೆಸುವುದು ಕಂಡುಬರುತ್ತದೆ.

ಈ ಸಮುದಾಯದ ಎಲ್ಲಾ ವ್ಯವಹಾರಗಳು ಹಟ್ಟಿಯ ಮುಖಂಡ ಅಥವಾ ನಾಯಕನ ಮೂಲಕ ನಡೆಯುತ್ತವೆ. ನ್ಯಾಯವನ್ನು ದೊರಕಿಸಿಕೊಡಲು ಜಾತಿ ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ.

*1 ಪೋಸ್ಟ್ ಡಾಕ್ಟೋರಲ್ ಫೆಲೋ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ ಹಂಪಿ, ವಿದ್ಯಾರಣ್ಯ-583276.*

ಪಂಚಾಯಿತಿಯ ರಚನೆಯಲ್ಲಿ ಸಮಾಜದ ಯಜಮಾನ, ಬುದ್ಧಿವಂತ, ತೆಲಿಗಾರ(ಭಂಡಾರಿ) ತಳವಾರ ನಾಯಕನ ಹಾಗೆ ಕಾರ್ಯ ನಿರ್ವಹಿಸುತ್ತಾರೆ.

ಈ ಸಮುದಾಯದವರು ಸಣ್ಣ–ಪುಟ್ಟ ವ್ಯವಹಾರಗಳನ್ನು ತಮ್ಮ ಹಟ್ಟಿಯಲ್ಲಿಯೇ ಬಗೆಹರಿಸಿಕೊಳ್ಳುವ ವಿವೇಕ ಶಾಲಿಗಳಾಗಿದ್ದಾರೆ. ತೀರ ಗಂಭೀರವೆನ್ನಬಹುದಾದ ಕೆಲವು ಜಟಿಲ ಹಾಗೂ ಸಮಸ್ಯಾತ್ಮಕವಾಗಿರುವ ನ್ಯಾಯಗಳನ್ನು ಬಗೆಹರಿಸಿಕೊಳ್ಳಲು ಕಟ್ಟೆಮನೆಗಳನ್ನು ಆಶ್ರಯಿಸುತ್ತಾರೆ. ಇವರು ದೊಡ್ಡಪ್ರಮಾಣದ ನ್ಯಾಯ ತೀರ್ಮಾನಗಳಿಗಾಗಿ ಪ್ರಾದೇಶಿಕವಾಗಿ ಕಟ್ಟೆಮನೆಗಳನ್ನು ಮಾಡಿಕೊಂಡಿರುತ್ತಾರೆ. ಗೋಲಕುಂಡ ಕಟ್ಟೆ, ಹರಪನಹಳ್ಳಿ ಕಟ್ಟೆ, ಗದ್ದಾಲಕಟ್ಟೆ ಮನೆಗಳೆಂದು ಪ್ರಾದೇಶಿಕವಾಗಿ ವಿಭಜಿಸಿಕೊಂಡು ಈ ಕಟ್ಟೆಮನೆಗಳಲ್ಲಿ ನ್ಯಾಯ ತೀರ್ಮಾನಗಳನ್ನು ಮಾಡುತ್ತಾರೆ. ಇವರ ಪ್ರಮುಖ ಧಾರ್ಮಿಕ ಸಂಸ್ಥೆಗಳು ಮತ್ತು ನ್ಯಾಯ ತೀರ್ಮಾನ ಮಾಡುವ ಕಟ್ಟೆಮನೆಗಳು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಮಾವಿನಹಳ್ಳಿ ಕಲ್ಲೇಸ್ವಾಮಿಯಹಳ್ಳಿ, ಕಡೂರು ತಾಲೂಕಿನ ಚೋಮನಹಳ್ಳಿ, ಮತಿಘಟ್ಟ, ಜಾವಗಲ್ಲು, ಬಕ್ಕಪ್ಪನ ಕೊಪ್ಪಲಿನಲ್ಲಿವೆ. ಈ ಕಟ್ಟೆ ಮನೆಗಳಷ್ಟೇ ಅಲ್ಲದೆ ಬಯಲು ಸೀಮೆಯ ಧಾರ್ಮಿಕ ಹಾಗೂ ಗುಡಿಕಟ್ಟೆ ಮನೆಯು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಕೊಮರ್‌ನಾಡೆ ಎಂದು ಪ್ರಸಿದ್ಧವಾಗಿರುವ ರಂಗವ್ವನಹಳ್ಳಿಯಲ್ಲಿ ಕಂಡುಬರುತ್ತದೆ. ಈ ಕಟ್ಟೆಮನೆಯ ವ್ಯಾಪ್ತಿಗೆ, ದಾವಣಗೆರೆ, ಶಿವಮೊಗ್ಗ, ಕೂಡ್ಲಿಗಿ ತಾಲೂಕಿನಲ್ಲಿ ನೆಲೆಸಿರುವ ಸುಡುಗಾಡು ಸಿದ್ಧ ಸಮುದಾಯದವರಿಗೆ ಗುಡಿ ಕಟ್ಟೆಮನೆಯಾಗಿದೆ. ರಂಗವ್ವನಹಳ್ಳಿಯಲ್ಲಿ ಈ ಸಮುದಾಯದ ಗಂಗಾಮಾತೆಯ ದೇವಸ್ಥಾನವಿರುವುದನ್ನು ಕಾಣಬಹುದು. ಇಲ್ಲಿ ಮೂರು ವರ್ಷಕ್ಕೊಮ್ಮೆ ಜಾತ್ರೆಯು ನಡೆಯುತ್ತದೆ. ಆಧುನಿಕ ದಿನಗಳಲ್ಲಿ ನ್ಯಾಯ ತೀರ್ಮಾನದ ಪವಿತ್ರ ಕೇಂದ್ರವಾಗಿ ಈ ಕಟ್ಟೆಮನೆ ಕಾರ್ಯ ನಿರ್ವಹಿಸುವುದನ್ನು ಕಾಣಬಹುದು. ಇಂತಹ ಬೆಡಗಿನವರೆ ಇಲ್ಲಿ ನ್ಯಾಯ ತೀರ್ಮಾನ ಬಗೆಹರಿಸಬೇಕು ಇಂತಹ ಕುಲದವರೇ ಭಂಡಾರಿ (ತೆಲೆವಾರಿ) ನಾಯಕನಾಗಬೇಕೆಂಬ ಕಟ್ಟು ಪಾಡುಗಳಿರುತ್ತವೆ. ಇಂದು ನ್ಯಾಯ ತೀರ್ಮಾನ ಮಾಡುವ ನಾಯಕರೆಂದರೆ ಲಕ್ಷ್ಮಣ ಪಾಲಂಕೊಳ್ಳ ಬೆಡಗಿನವರು ಹಿರಿಯೂರು ಮಾರಪ್ಪ ಕರ್ಸೋಳು ಬೆಡಗಿನವರು, ಜಗಳೂರು ಸನ್ನಪ್ಪಯ್ಯ ಬೆಡಗನಿವರು, ಕಂದುಕುರೊಳ್ ಬೆಡಗಿಗೆ ಸೇರಿದ ಕಟ್ಟಾಗುರಪ್ಪ ಕಟ್ಟುವಾಳ ಕಡದರಹಳ್ಳಿ, ದುರುಗೇಶಿ ತಿರುಪಾತವಾಳು, ಕಡದರ ಹಳ್ಳಿ ಅಜ್ಜಪ್ಪ ಭಂಡಾರಿಯವರು ನ್ಯಾಯ ಅನ್ಯಾಯ ನಡೆಯುವ ವಿಷಯವನ್ನು ಸಮುದಾಯಕ್ಕೆ ಹಾಗೂ ಇತರ ನಾಯಕರಿಗೆ ತಿಳಿಸುತ್ತಾರೆ. ನಿಗದಿಪಡಿಸಿ ದಿನ ಎಲ್ಲರು ಸೇರಿ ನ್ಯಾಯ ತೀರ್ಮಾನ ಕೈಗೊಳ್ಳುತ್ತಾರೆ. ಪಾರಂಪರಿಕ ದಿನಗಳಲ್ಲಿ ನ್ಯಾಯ ಪಂಚಾಯಿತಿಯು ಒಂದು ವಾರವಾದರೂ ಬಗೆಹರಿಯುತ್ತಿರಲಿಲ್ಲ. ಅದಕ್ಕಾಗಿ ಬೇರೆ ಬೇರೆ ವಿಧಾನಗಳನ್ನು ಅನುಸರಿಸುತ್ತಿದ್ದರು. ಕೆಲ ಪಂಚಾಯತಿಗಳಲ್ಲಿ ಮೂರು ದಿನಗಳವರೆಗೆ ನಡೆದ ವ್ಯಾಜ್ಯಗಳು ಒಂದೇ ದಿನದಲ್ಲಿ ಬಗೆಹರಿಯುತ್ತಿದ್ದವು. ಸಮುದಾಯದ ನಾಯಕರ ಸಮ್ಮುಖದಲ್ಲಿ ಚರ್ಚಿಸಿ ಅಪರಾಧಿಗಳಿಗೆ ಶಿಕ್ಷೆಯನ್ನು ವಿಧಿಸುವ ಅಧಿಕಾರ ಸಮುದಾಯದ ನಾಯಕರಿಗಿರುತ್ತದೆ. ವಿಭಿನ್ನವಾದಂತಹ ಶಿಕ್ಷೆಗಳನ್ನು ವಿಧಿಸುವುದನ್ನು ಈ ಸಮುದಾಯದಲ್ಲಿ ಕಾಣಬಹುದು. ಸುಡುಗಾಡು ಸಿದ್ಧರು ಹಟ್ಟಿಗಳಲ್ಲಿ ನ್ಯಾಯ ಬಗೆಹರಿಯದಿದ್ದಲ್ಲಿ ಆರೋಪಿಗಳಿಂದ ಯಜಮಾನ ರೂ.100 ರಿಂದ 500 ಗಳವರೆಗೆ ಹಣ ಇಲ್ಲವೆ ಬಂಗಾರದ ಉಂಗುರವನ್ನು ಸಾಂಕೇತಿಕವಾಗಿ ಕಟ್ಟಿಸಿಕೊಂಡು ಒಂದು ಗಡವು ನಿಗದಿಪಡಿಸಿಕೊಂಡು ಕಟ್ಟೆಮನೆಗಳಲ್ಲಿ ನ್ಯಾಯ ತೀರ್ಮಾನಕ್ಕಾಗಿ ಸೇರುತ್ತಾರೆ. ಇದಕ್ಕೆ "ಹಡಕಾ" ಕಟ್ಟಿಸಿಕೊಳ್ಳುವುದು ಎನ್ನುತ್ತಾರೆ. ನ್ಯಾಯ ತೀರ್ಮಾನದ ಮೇಲೆ ತಪ್ಪಿತಸ್ಥರ ಮೇಲೆ ದಂಡ ವಿಧಿಸಿ

ಹಡಕಾವನ್ನು ಆರೋಪಿಗೆ ಹಿಂದಿರುಗಿಸುತ್ತಾರೆ. ಸುಡುಗಾಡಸಿದ್ಧರು ಪಾರಂಪರಿಕ ದಿನಗಳಿಂದಲೂ ಆರೋಪಿಗಳಿಗೆ ಹಲವು ಬಗೆಯ ದಂಡಗಳನ್ನು ಹಾಗೂ ಶಿಕ್ಷೆಗಳನ್ನು ನಿರ್ಧರಿಸಿದ್ದಾರೆ. ಇದರಿಂದ ಅವರಿಗೆ ಸಮಾಜದಲ್ಲಿನ ದುಷ್ಟ ಹಾಗೂ ದುರ್ನಡತೆಯ ವ್ಯಕ್ತಿಗಳನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ. ಇವರಲ್ಲಿ ನೀಡುವ ಶಿಕ್ಷೆಗಳು ವಿಬಿನ್ನತೆಯಿಂದ ಕೂಡಿರುವುದನ್ನು ಕಾಣಬಹುದು. ನ್ಯಾಯ ತೀರ್ಮಾನ ಬಹಳ ಕಟ್ಟುನಿಟ್ಟಿನಿಂದ ಕೂಡಿರುತ್ತದೆ. ಹಿರಿಯರೇ ಕಲಹಗಳನ್ನು ಬಗೆಹರಿಸುತ್ತಾರೆ. ಈ ಸಮುದಾಯದಲ್ಲಿ ನಡೆಯುವ ಕಲಹಗಳು ಮತ್ತು ಕಲಹಗಳಿಗೆ ನೀಡುವ ಶಿಕ್ಷೆಗಳು ಈ ಕೆಳಗಿನಂತಿವೆ.

ಹೆಂಡತಿಯನ್ನು ಗಂಡ ಪೊರಕೆಯಿಂದ ಹೊಡೆದರೆ ಇಪ್ಪತ್ತೈದು ಪೈಸೆ ಕಟ್ಟೆಮನೆಗೆ ಕಟ್ಟಲು ಹಿರಿಯರು ಸೂಚಿಸುತ್ತಾರೆ. ಗಂಡ ಹೆಂಡತಿಯನ್ನು ಚಪ್ಪಲಿಯಲ್ಲಿ ಹೊಡೆದರೆ ಹಿರಿಯರು ಸೇರಿ ಪಂಚಾಯಿತಿ ಮಾಡಿ ಕಟ್ಟೆಮನೆಯ ಹತ್ತಿರ ಸೇರಿ ಚಪ್ಪಲಿಯಿಂದ ಹೊಡೆಸಿಕೊಂಡವನು ಹಾಗೂ ಹೊಡೆದವನು ಕುಲದೇವತೆಯ ದೇವಸ್ಥಾನದ ಹತ್ತಿರ ಪೂಜಾರಿಯ ಸಮ್ಮುಖದಲ್ಲಿ ತಣ್ಣೀರಿನಲ್ಲಿ ಸ್ನಾನ ಮಾಡಿದನಂತರ ತೀರ್ಥ ಹಾಕುತ್ತಾರೆ. ಹಿರಿಯರ ಸಮ್ಮುಖದಲ್ಲಿ ನ್ಯಾಯ ನಿರ್ಣಯದಂತೆ 1001ರೂ. ಕುಲದೇವತೆಗೆ ದೇವಸ್ಥಾನಕ್ಕೆ ತಪ್ಪು ಕಾಣಿಕೆ ಕೊಡಲೇಬೇಕಾಗುತ್ತದೆ.

ಅಸಭ್ಯತೆಯಿಂದ ವರ್ತಿಸಿದರೆ ಹಾಗೂ ಅವಾಚ್ಯ ಶಬ್ದಗಳನ್ನು ಬಳಸಿದರೆ ನ್ಯಾಯ ದೇವತೆಯ ಹತ್ತಿರ ಕುಲದೇವತೆಗೆ ರೂ. 25 ರಿಂದ ರೂ.500 ಅಥವಾ ರೂ.1000ವರೆಗೆ ದಂಡ ಹಾಕುತ್ತಾರೆ. ಕುಲಪಂಚಾಯಿತಿ ನಡೆಯುವ ಸಂದರ್ಭದಲ್ಲಿ ಎಲೆ ಅಡಿಕೆಯನ್ನು ನೀಡಿ ನ್ಯಾಯ ತೀರ್ಮಾನ ಬಗೆಹರಿಸುತ್ತಾರೆ. ಈ ಸಮುದಾಯದಲ್ಲಿ ಯುವಕರು ಅಪಹರಣ ವಿವಾಹವಾದರೆ ಕುಲದ ದೀಕ್ಷೆ ಪಡೆದುಕೊಂಡ ನಂತರವೇ ಕುಲದಲ್ಲಿ ಪ್ರವೇಶವಿರುತ್ತದೆ. ವಿವಾಹದ ಸಂದರ್ಭದಲ್ಲಿ ದೀಕ್ಷೆ ನೀಡುವ ಆಚರಣೆ ನಡೆಯುತ್ತದೆ. ಈ ಆಚರಣೆಯನ್ನು ನೆರವೇರಿಸಿದ ನಂತರ ಹಿರಿಯರ ತೀರ್ಮಾನದಂತೆ ಕಟ್ಟೆಮನೆಗೆ ರೂ.1600 ದಂಡ ಕಟ್ಟಿದ ನಂತರವೇ ಕುಲದ ಒಳಗಡೆ ಪ್ರವೇಶವಿರುತ್ತದೆ. ತಮಗಿಂತ ಕೆಳಮಟ್ಟದ ಕುಲದವರನ್ನು ವಿವಾಹವಾದರೆ ಕುಲದ ಒಳಗಡೆ ಪ್ರವೇಶವಿಲ್ಲ. ಇವರನ್ನು ಕುಲದಿಂದ ಬಹಿಷ್ಕರಿಸುತ್ತಾರೆ. ಯಾರು ಸಹ ಇವರೊಂದಿಗೆ ಸಂಬಂಧಗಳನ್ನಾಗಲಿ, ವ್ಯವಹಾರವನ್ನಾಗಲಿ ಮಾಡುವಂತಿಲ್ಲ. ಒಂದು ವೇಳೆ ಹಿರಿಯರ ಮಾತು ಮೀರಿ ನಡೆಸಿದವರಿಗೂ ಸಹ ದಂಡ ಶಿಕ್ಷೆ ವಿಧಿಸುತ್ತಾರೆ.

ತಮಗಿಂತ ಮೇಲು ಶ್ರೇಣಿಯಲ್ಲಿರುವ ಸಮುದಾಯದವರೊಂದಿಗೆ ವಿವಾಹವಾದರೆ ದೀಕ್ಷೆ ನೀಡಿ ಕುಲದ ಒಳಗಡೆ ಪ್ರವೇಶವಿರುತ್ತದೆ. ಮದುವೆಯ ವೇಳೆಯಲ್ಲಿ ನೀಡುವ ದೀಕ್ಷೆ ಜೊತೆಗೆ ಹಿರಿಯರ ಸಮ್ಮುಖದಲ್ಲಿ ಬಂಗಾರದ ಕಡ್ಡಿಯಲ್ಲಿ ನಾಲಿಗೆ ಸುಟ್ಟು, ತಲೆ ಬೋಳಿಸಿ, ಹೊಸ ಮಡಿಕೆಯಿಂದ ನೀರನ್ನು ತುಂಬಿ ಸ್ನಾನಮಾಡಿಸಿ ಹೊಸ ಬಟ್ಟೆಧರಿಸಿ ನಂತರ ದೀಕ್ಷೆ ನೀಡುತ್ತಾರೆ. ಮಹಿಳೆಯರು ಬೇರೆ ಸಮುದಾಯದವರೊಂದಿಗೆ ವಿವಾಹವಾದರೆ ತಮ್ಮ ಕುಲದೊಳಗೆ ಹಾಗೂ ಸಮುದಾಯದವರೊಂದಿಗೆ ವಾಸಿಸಲು ಅವಕಾಶವಿರುವುದಿಲ್ಲ.

ಗಂಡ ಹೆಂಡತಿ ಜಗಳವಾಡಿದರೆ ಸಮುದಾಯದ ಹಿರಿಯರ ತೀರ್ಮಾನದಂತೆ ಒಂದು ವರ್ಷಗಳ ಕಾಲ ಅವಳು ತವರು ಮನೆಯಲ್ಲಿಯೇ ವಾಸವಾಗಿರಬೇಕು. ಈ ಸಂದರ್ಭದಲ್ಲಿ ಗಂಡನಿಗೆ ಜೀವನ

ನಡೆಸುವುದು ಕಷ್ಟವಾಗಿರುತ್ತದೆ. ಇಂತಹ ಶಿಕ್ಷೆಗಳಿರುವುದರಿಂದ ಈ ಸಮುದಾಯದವರು ಎಚ್ಚರಿಕೆಯಿಂದಿರುತ್ತಾರೆ. ಗಂಡ ಹೆಂಡತಿಗೆ ಹೆಂಡತಿ ಗಂಡನಿಗೆ ವಿಚ್ಛೇದನ ನೀಡಿ ಮರು ಮದುವೆಯಾಗಲು ಇಬ್ಬರಿಗೂ ಈ ಸಮುದಾಯದಲ್ಲಿ ಅವಕಾಶಗಳಿಲ್ಲ.

ಕಳ್ಳತನ ಮಾಡುವುದು ಅಪರಾಧವಾಗಿರುತ್ತದೆ. ಆದ್ದರಿಂದ ಕಳ್ಳತನ ಮಾಡುವುದು ಕಡಿಮೆ ಒಂದು ವೇಳೆ ಕಳ್ಳತನ ಮಾಡಿದರೆ ದಂಡ ಶಿಕ್ಷೆ ವಿಧಿಸುತ್ತಾರೆ. ಹೊಲದಲ್ಲಿ ಮನೆಗಳಲ್ಲಿ ಕಳ್ಳತನ ಮಾಡಿದರೆ ತಮ್ಮ ಸಮುದಾಯದವರೊಂದಿಗೆ 3 ವರ್ಷ ಬಹಿಷ್ಕಾರ ಮತ್ತು ರೂ.1001 ದಂಡ ವಿಧಿಸುತ್ತಾರೆ. ಮಹಿಳೆ ಅಥವಾ ಪುರುಷರು ಅನ್ಯ ಮಹಿಳೆಯರೊಂದಿಗೆ ಅಕ್ರಮ ಸಂಬಂಧವಿಟ್ಟುಕೊಂಡರೆ ಕುಲದಿಂದ ಬಹಿಷ್ಕಾರ ಹಾಕುತ್ತಾರೆ. ಪ್ರತಿಯೊಬ್ಬ ಸದಸ್ಯನೂ ತಮ್ಮ ಯಜಮಾನ ಹೇಳಿದಂತೆ ನಡೆದುಕೊಳ್ಳುತ್ತಾನೆ. ಎದುರು ಉತ್ತರ ಕೊಡುವಷ್ಟು ಧೈರ್ಯ ಅವನು ತಂದು ಕೊಳ್ಳುವುದಿಲ್ಲ. ದೈವದ ನಿರ್ಣಯವೇ ದೇವರ ನಿರ್ಣಯವೆಂದು ಭಾವಿಸುತ್ತಾನೆ. ಪ್ರತಿಕ್ಷಣಕ್ಕೂ ತನ್ನ ಆಚಾರ, ವಿಚಾರಗಳ, ಹಿನ್ನೋಟ–ಮುನ್ನೋಟಗಳ ಕುರಿತು ಚಿಂತೆ ಮಾಡುತ್ತಾನೆ. ತಪ್ಪು ಮಾಡಿದರೆ ಉಗ್ರ ಶಿಕ್ಷೆ, ದಂಡದ ಮೇಲೆ ದಂಡ ಕುಲದಿಂದ ಬಹಿಷ್ಕಾರ (ಬೇಸ್‌ಗಾರ್) ಇತ್ಯಾದಿಗಳಿಗೆ ಗುರಿಯಾಗ ಬೇಕಾಗುತ್ತದೆ. ಇವರಲ್ಲಿ ಶಿಕ್ಷೆಗಳು ಕಠಿಣವಾಗಿರುವುದರಿಂದ ನಡೆ–ನುಡಿ, ಆಚಾರ–ವಿಚಾರಗಳಲ್ಲಿ ಎಚ್ಚರಿಕೆಯಿಂದ ನಡೆಯುತ್ತಾರೆ.

ಈ ಸಮುದಾಯ ನ್ಯಾಯ ಮತ್ತು ಕಠಿಣ ಶಿಕ್ಷೆಗೆ ಹೆಸರು ಪಡೆದಿದೆ. ದಂಡದ ಮೇಲೆ ದಂಡ ಶಿಕ್ಷೆಯ ಮೇಲೆ ಶಿಕ್ಷೆ ಅವರಲ್ಲಿ ಸರ್ವೇ ಸಾಮಾನ್ಯವಾಗಿದೆ. ನ್ಯಾಯ ಕೇಳಲಿಕ್ಕೆ ಹೋದ ವ್ಯಕ್ತಿಗೆ ಪರಿಪೂರ್ಣ ನ್ಯಾಯಧಾನ ಅಪರಾಧಿಗೆ ಉಗ್ರ ಶಿಕ್ಷೆ ಸಮಾಜದಿಂದ ಬಹಿಷ್ಕಾರ. ಬಹಿಷ್ಕಾರ ಮುಗಿಯುವ ತನಕ ಸಮುದಾಯದ ಒಳಗಡೆ ಪ್ರವೇಶವಿಲ್ಲ. ಒಂದು ವೇಳೆ ನ್ಯಾಯ ಉಲ್ಲಂಘಿಸಿದರೆ ಪುನಃ ಬಹಿಷ್ಕಾರಕ್ಕೆ ಗುರಿಯಾಗಬೇಕಾಗುತ್ತದೆ. ನ್ಯಾಯ ನಿರ್ಣಯ ನೀಡುವ ಸಂದರ್ಭದಲ್ಲಿ ಬೇರೆ ಸಮುದಾಯದವರಿಗೆ ಪ್ರವೇಶವಿಲ್ಲ. ಎಂತಹ ಸಂದರ್ಭವಿದ್ದರೂ ತಮ್ಮ ಸಮುದಾಯದ ಮುಖಂಡರಿಂದಲೇ ಪರಿಹರಿಸಿಕೊಳ್ಳುತ್ತಾರೆ.

ಕುಲ ಪಂಚಾಯಿತಿಯು ಗೊತ್ತು ಮಾಡಿದ ದಿವಸದಂದು ನ್ಯಾಯಕಟ್ಟೆಮನೆ ಎದುರಿನ ಪ್ರದೇಶದಲ್ಲಿ ಜನ ಸೇರುತ್ತಾರೆ. ಈ ವಿಷಯವನ್ನು ಭಂಡಾರಿ ತಲೆವಾರಿ ಎಲ್ಲರಿಗೂ ವಿಷಯವನ್ನು ತಲುಪಿಸುತ್ತಾರೆ. ವಿಶೇಷವೆಂದರೆ ಕುಲ ಪಂಚಾಯಿತಿ ನ್ಯಾಯ ತೀರ್ಮಾನ ಮಾಡುವಾಗ ಹೆಂಗಸರಿಗೆ ಪ್ರವೇಶವಿಲ್ಲ. ಸಮಾಜದ ಸಮಸ್ಯೆಗಳ ಪರಿಹಾರ ಮತ್ತು ನೀತಿ ನಿಯಮಗಳನ್ನು ನಿರ್ಧರಿಸುವುದಕ್ಕಾಗಿ ಕರೆಯುವ ಸಭೆಯಲ್ಲಿ ಭಾಗವಹಿಸುವ ಹಕ್ಕು ಮಹಿಳೆಗೆ ಇಲ್ಲ. ಒಂದು ವೇಳೆ ನ್ಯಾಯ ಕೇಳಲು ಮಹಿಳೆಯರಿಗೆ ಕಟ್ಟೆಮನೆಯಿಂದ ದೂರದಲ್ಲಿ ನಿಂತು ವಿಚಾರಗಳನ್ನು ಹೇಳಬೇಕು. ವಿಚಾರಗಳನ್ನು ಪರಿಶೀಲಿಸಿ ನ್ಯಾಯ ತೀರ್ಮಾನ ನೀಡುತ್ತಾರೆ. ಇವರು ಯಾವುದೇ ನ್ಯಾಯಕಟ್ಟೆ ಮನೆಯಲ್ಲಿ ಯಾವ ತೊಂದರೆಯಾಗದ ರೀತಿಯಲ್ಲಿ ಭಾಗವಹಿಸುತ್ತಾರೆ. ತಮ್ಮ ತಪ್ಪು ನೋವು ನಲಿವುಗಳನ್ನು ಕುರಿತು ಮುಕ್ತವಾಗಿ ಚರ್ಚಿಸುತ್ತಾರೆ. ಸಮಾಜವು ಎದುರಿಸುವ ಸಮಸ್ಯೆ ಸವಾಲುಗಳನ್ನು ಕುರಿತು ತಿಳುವಳಿಕೆಗಳನ್ನು ನೀಡುತ್ತಾರೆ. ನ್ಯಾಯ ತೀರ್ಮಾನ ನೀಡುವವನು ಅದರ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದಿಲ್ಲ.

**ರಂಗವ್ವನಹಳ್ಳಿ (ಕೊಮಾರನಾಡ) ಕಟ್ಟೆಮನೆ**

ಈ ಕಟ್ಟೆಮನೆಯ ವ್ಯಾಪ್ತಿಯಲ್ಲಿ ಹದಿನಾರು ಕಟ್ಟೆಮನೆಗಳಿವೆ, ನಗರಗೆರೆ, ಬೆಲ ಬಾಲಪಲ್ಲಿ, ದಶಮಾಪುರ, ಬಡ್ಲಡಿಕೆ, ಮುರಂಡಿ, ಕಲ್ಲೋಜನಹಳ್ಳಿ, ಬರಗೇನಹಳ್ಳಿ, ಸೋಮನಹಳ್ಳಿ, ಮರಬನಹಳ್ಳಿ, ರಂಗೇನಹಳ್ಳಿ, ಬಂದೂರು, ಮಂಗೇನಹಳ್ಳಿ, ಗೋಲಕೊಂಡಕಟ್ಟೆ (ಮೈಲೆನಹಳ್ಳಿ), ಹಗರದಹಳ್ಳಿ, ಸಿದ್ದಾಪುರ (ಚನ್ನಗಿರಿ ಜೋಳದ ಸಿದ್ದಾಪುರ) ಮತ್ತು ಪುಲಸ ಮಾವಿಡಿ. ಈ ಎಲ್ಲ ಕಟ್ಟೆಮನೆಗಳಿಗೆ ಮೂಲ ಕೇಂದ್ರ ರಂಗವ್ವನಹಳ್ಳಿ ಕಟ್ಟೆಮನೆ. ಈ ಕಟ್ಟೆಮನೆಗಳಲ್ಲಿ ನ್ಯಾಯ ನಿರ್ಣಯವಾಗದಿದ್ದಾಗ ರಂಗವ್ವನಹಳ್ಳಿಯಲ್ಲಿ ವರ್ಷದಲ್ಲಿ ಒಂದು ಸಲ ನ್ಯಾಯ ನಿರ್ಣಯ ವ್ಯವಸ್ಥೆ ಮಾಡಿ ನಿಗದಿಪಡಿಸಿರುತ್ತಾರೆ. ಅಲೆಮಾರಿ ಸಮುದಾಯದವರು ದಸರ ಹಬ್ಬಕ್ಕೆ ಎಲ್ಲರು ಸೇರುತ್ತಾರೆ. ಈ ಸಮಯದಲ್ಲಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ. ಮೇಲೆ ವಿವರಿಸಿದ ಕಟ್ಟೆಮನೆಗಳನ್ನು ಬಿಟ್ಟು ಅಧೀನದಲ್ಲಿ ಅನೇಕ ಚಿಕ್ಕ, ಚಿಕ್ಕ ಕಟ್ಟೆಮನೆಗಳು ತಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತವೆ.

**ಉಪಸಂಹಾರ**

ಅಲೆಮಾರಿಗಳಾಗಿದ್ದ ಈ ಸಮುದಾಯವು ಇಂದು ನೆಲೆಗಳನ್ನು ಕಾಣಲು ಪ್ರಾರಂಭಿಸಿದೆ. ತಾವು ನೆಲೆಸಿರುವ ಸ್ಥಳಗಳಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡು ಜೀವನ ನಡೆಸುತ್ತಿದ್ದಾರೆ. ಕೆಲವರು ವಸತಿಗಾಗಿ ಚಡಪಡಿಸುತ್ತಾ ಜೀವನ ಸಾಗಿಸುತ್ತಿದ್ದಾರೆ. ನ್ಯಾಯ ನಿರ್ಣಯಗಳು ಸಹ ಬದಲಾಗಿವೆ. ಸುಡುಗಾಡು ಸಿದ್ಧ ಸಮುದಾಯದ ಯುವಕರು ಆಧುನಿಕತೆಯ ಪ್ರಭಾವದಿಂದಾಗಿ ಬದಲಾವಣೆಗೆ ಹೊಂದಿಕೊಳ್ಳುತ್ತಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಅನೇಕ ಪ್ರಕರಣಗಳು ನ್ಯಾಯಾಲಯ, ಪೋಲಿಸ್ ಠಾಣೆಗೆ ಹೋಗಿರುವುದನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**

- ಖಂಡೋಬ ಪಿ.ಕೆ. (2011). ಸುಡುಗಾಡು ಸಿದ್ಧರ ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಬಸವರಾಜ ನೆಲ್ಲಿಸರ. (1989). ಸುಡುಗಾಡು ಸಿದ್ಧರು. ಸಂಯುಕ್ತ ಕರ್ನಾಟಕ ಸೌರಭ.
- ಭಾಸ್ಕರ ಟಿ.ಎಂ. (2000). ಸುಡುಗಾಡು ಸಿದ್ಧರು: ಒಂದು ಸಾಂಸ್ಕೃತಿಕ ಅಧ್ಯಯನ. ಮರುಗ ಪ್ರಕಾಶನ, ಗುಲ್ಬರ್ಗ.
- ಮಲ್ಲಿಕ ಘಂಟಿ ಎಂ.ಎಸ್. (2008). ಸುಡುಗಾಡು ಸಿದ್ಧ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಮೇತ್ರಿ ಕೆ.ಎಂ. (2002). ಬುಡಕಟ್ಟು ಕುಲಕಸುಬುಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ನಾಗೇಶ್ ಎಚ್.ವಿ. (2003). ಕರ್ನಾಟಕ ಬುಡಕಟ್ಟುಗಳಲ್ಲಿ ನ್ಯಾಯ ತೀರ್ಮಾನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ.
- ನಾಗಭೂಷಣ ಬಗ್ಗನಡು. (2016). ಸುಡುಗಾಡು ಸಿದ್ಧ ಸಮುದಾಯ. ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು.